

# ರಣ್‌ವೀರ್ ರೆಡಿ

ಕ್ರೀಡೆ ಮತ್ತು ಕ್ರೀಡಾತಾರೆಯರ ಕುರಿತ ಸಿನಿಮಾಗಳು ಈಗ ಬಾಲಿವುಡ್ ನಿರ್ದೇಶಕರ ಹೊಸ ಕ್ರೇಝ್ ಎನ್ನುವಂತಾಗಿದೆ. ಮೇರಿ ಕೋಮ್, ಮಹೇಂದ್ರಸಿಂಗ್ ಧೋನಿ, ಮಿಲ್ಖಾ ಸಿಂಗ್ ಮುಂತಾದವರ ಕುರಿತ ಸಿನಿಮಾಗಳು ಬಾಲಿವುಡ್‌ನಲ್ಲಿ ನಿರ್ಮಾಪಕರಿಗೆ ಸಾಕಷ್ಟು ಲಾಭವನ್ನೂ ತಂದುಕೊಟ್ಟವು. ಇದೀಗ ಕಪಿಲ್‌ದೇವ್ ಸರದಿ. ಆದರೆ ಕಪಿಲ್‌ದೇವ್ ಕುರಿತ ಈ ಹೊಸ ಸಿನಿಮಾ 1983ರ ಭಾರತೀಯ ಕ್ರಿಕೆಟ್ ತಂಡದ ವಿಶ್ವಕಪ್ ವಿಜಯದ ಸುತ್ತ ಕೇಂದ್ರೀಕೃತವಾಗಿದೆ. ಹಾಗೆಂದೇ ಈ ಚಿತ್ರಕ್ಕೆ '83' ಎಂದು ಹೆಸರಿಡಲಾಗಿದೆ. ಕಪಿಲ್‌ದೇವ್ ಪಾತ್ರಕ್ಕೆ ಜೀವ ತುಂಬಲು ರಣ್‌ವೀರ್ ಸಿಂಗ್ ಈಗಾಗಲೇ ಸಂಪೂರ್ಣ ಸನ್ನದ್ಧನಾಗಿದ್ದಾನೆ. ಇತ್ತೀಚೆಗೆ ಟೀವಿಯೊಂದರಲ್ಲಿ ಕಪಿಲ್ ಜೊತೆಗೆ ಕಾಣಿಸಿಕೊಂಡ ರಣ್‌ವೀರ್ ಮಾಡಿದ ತನ್ನ ಮ್ಯಾನರಿಸಂಗಳನ್ನು ನೋಡಿ ಖುದ್ದು ಕಪಿಲ್ ಫಿದಾ ಆಗಿದ್ದಾರೆ! ರಣ್‌ವೀರ್ ಈ ಸಿನಿಮಾದ ಸಲುವಾಗಿಯೇ ಕಪಿಲ್‌ದೇವ್ ಜೊತೆಗೆ ಸಾಕಷ್ಟು ಕಾಲ ಕಳೆದಿದ್ದಾನೆ.

1983ರಲ್ಲಿ ಭಾರತದ ತಂಡದಲ್ಲಿ ಮಿಂಚಿನ ಎಲ್ಲ ಆಟಗಾರರ ಪಾತ್ರಗಳಿಗೂ ಜೀವ ತುಂಬಲು ಅವರಂತೆಯೇ ಕಾಣುವ ಕಲಾವಿದರನ್ನು ಆಯ್ಕೆ ಮಾಡಲಾಗಿದೆ. ಮುಂಬೈಯಲ್ಲಿ ಕಳೆದ ಒಂದು ತಿಂಗಳಿಂದ ಪ್ರತಿದಿನ ಬೆಳಿಗ್ಗೆ 7ರಿಂದ 10 ಗಂಟೆಯವರೆಗೆ ಎಲ್ಲ ಕಲಾವಿದರಿಗೆ ಕ್ರಿಕೆಟ್ ಪ್ರಾಕ್ಟೀಸ್ ನೀಡಲಾಗಿದೆ.

ಕಮರ್ಷಿಯಲ್ ಆ್ಯಕ್ಷನ್ ಚಿತ್ರಗಳ ಮೂಲಕ ಬಾಲಿವುಡ್‌ನಲ್ಲಿ ಭಾರೀ ಹೆಸರು ಮಾಡಿರುವ ಕಬೀರ್‌ಖಾನ್ ಈ ಚಿತ್ರದ ನಿರ್ದೇಶಕ. ಸ್ಕಾಟ್ಲೆಂಡ್‌ನ ಬಂದರು ನಗರ ಗ್ಲಾಸ್ಗೋದ ಸ್ಥಳೀಯ ಕ್ರಿಕೆಟ್ ಕ್ಲಬ್‌ನಲ್ಲಿ ಜೂನ್ 5ರಂದು ಶೂಟಿಂಗ್ ಆರಂಭವಾಗಲಿದೆ. ಬಳಿಕ ಲಂಡನ್ನಿನ ಡಲ್‌ವಿಚ್ ಕಾಲೇಜ್, ಎಡಿನ್‌ಬರ್ಗ್ ಕ್ರಿಕೆಟ್ ಕ್ಲಬ್, ಕೆಂಟ್ ಮತ್ತು ಓವಲ್ ಕ್ರಿಕೆಟ್ ಮೈದಾನಗಳಲ್ಲಿ ಶೂಟಿಂಗ್ ನಡೆಯಲಿದೆ. ಶೂಟಿಂಗ್ ಸ್ಥಳಕ್ಕೂ ಕಪಿಲ್‌ದೇವ್ ಭೇಟಿ ಕೊಡಲಿದ್ದಾರೆ.

'ಇದು ನೈಜ ಕಥೆ ಆಧರಿಸಿದ್ದು. ಹಾಗಾಗಿ ಸಾಕಷ್ಟು ಸಂಶೋಧನೆ ಮತ್ತು ತರಬೇತಿಯ ಅಗತ್ಯವಿತ್ತು. ಆಗಿನ ಆಟಗಾರರ ಹಾವಭಾವ, ಮ್ಯಾನರಿಸಂ ಎಲ್ಲವನ್ನೂ ಗಮನಿಸಿದ್ದೇವೆ' ಎಂದಿದ್ದಾನೆ ಕಬೀರ್‌ಖಾನ್. ವೆಸ್ಟ್‌ಇಂಡೀಸ್ ಬೌಲರ್ ಮಾಲ್ಕಂ ಮಾರ್ಷಲ್ ಪಾತ್ರವನ್ನು ಆತನ ಮಗ ಮಾಲಿ ಮಾರ್ಷಲ್ ನಿರ್ವಹಿಸುತ್ತಿರುವುದು ವಿಶೇಷ. ಫಾಸ್ಟ್ ಬೌಲರ್ ಆಗಿರುವ ಕಾರ್ಲ್ ಗ್ರೀನಿಜ್ (ಗಾರ್ಡನ್ ಗ್ರೀನಿಜ್ ಮಗ) ಕೂಡಾ ಒಂದು ಪಾತ್ರ ನಿರ್ವಹಿಸುವ ಸಂಭವವಿದೆಯಂತೆ. ಪರದೆಯ ಮೇಲಿನ ತಂಡಕ್ಕೆ ಫಾಸ್ಟ್ ಬೌಲರ್, ಬಲ್ವಿಂದರ್ ಸಿಂಗ್ ಸಂಧು ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಅಂದ ಹಾಗೆ ಕಪಿಲ್‌ದೇವ್ ಮಗಳು ಅಮಿಯಾ ಈ ಚಿತ್ರದ ಅಸಿಸ್ಟೆಂಟ್ ಡೈರೆಕ್ಟರ್.

'ಸಿಂಬ' ಚಿತ್ರದ ಸೂಪರ್‌ಸಕ್ಸೆಸ್ ಬಳಿಕ ಬಾಲಿವುಡ್‌ನಲ್ಲಿ ಮುಂಚೂಣಿಯ ನಟನಾಗಿರುವ ರಣ್‌ವೀರ್, 'ಹೊಸ ಅವತಾರಕ್ಕೆ ನಾನು ಫುಲ್ ರೆಡಿ' ಎಂದಿದ್ದಾನೆ. 100 ದಿನಗಳ ಷೆಡ್ಯೂಲ್‌ನಲ್ಲಿ ಚಿತ್ರ ಮುಗಿಸುವುದಾಗಿ ಕಬೀರ್‌ಖಾನ್ ಹೇಳಿದ್ದಾನೆ.

■ ಬಿಂದು

# ಪ್ರಿಯಾಂಕಾ ದಾಖಲೆ

ಇನ್‌ಸ್ಟಾಗ್ರಾಮ್‌ನಲ್ಲಿ ಅನುಯಾಯಿಗಳ ಸಂಖ್ಯೆಯನ್ನು 4 ಕೋಟಿಗೆ ಹೆಚ್ಚಿಸಿಕೊಂಡಿರುವ ನಟಿ ಪ್ರಿಯಾಂಕಾ ಚೋಪ್ರಾ ಬಾಲಿವುಡ್‌ನಲ್ಲಿ ಹೊಸ ದಾಖಲೆ ನಿರ್ಮಿಸಿದ್ದಾಳೆ. ಈವರೆಗೆ ಅತ್ಯಧಿಕ ಅಭಿಮಾನಿಗಳನ್ನು ಹೊಂದಿದ್ದ ದೀಪಿಕಾ ಪಡುಕೋಣೆಯನ್ನು ಪ್ರಿಯಾಂಕಾ ಹಿಂದಿಕ್ಕಿದಂತಾಗಿದೆ. ದೀಪಿಕಾಗೆ ಇನ್‌ಸ್ಟಾಗ್ರಾಮ್‌ನಲ್ಲಿ 3.5 ಕೋಟಿ ಅಭಿಮಾನಿಗಳಿದ್ದರೆ, ಅಲಿಯಾ ಭಟ್‌ಗೆ 3.3 ಕೋಟಿ ಅಭಿಮಾನಿಗಳಿದ್ದಾರೆ. ಹಾಲಿವುಡ್‌ನ ಜನಪ್ರಿಯ ಗಾಯಕ, ನಟನೂ ಆಗಿರುವ ತನ್ನ ಗಂಡ ನಿಕ್ ಜೊನಾಸ್‌ಗಿಂತಲೂ ಪ್ರಿಯಾಂಕಾ ಅಭಿಮಾನಿಗಳ ಸಂಖ್ಯೆ ಹೆಚ್ಚಾಗಿರುವುದು ವಿಶೇಷ. ಆತನ ಬೆಂಬಲಿಗರ ಸಂಖ್ಯೆ 2.39 ಕೋಟಿ.

ಕಾನ್ಸ್ ಚಿತ್ರೋತ್ಸವದಲ್ಲಿ ಎಲ್ಲ ಬಾಲಿವುಡ್ ನಟಿಯರಿಗಿಂತ ಹೆಚ್ಚು ಮಿಂಚಿದ್ದೂ ಪ್ರಿಯಾಂಕಾಳೇ. ಲ್ಯಾವೆಂಡರ್ ಕಲರ್ ಡ್ರೆಸ್‌ನಲ್ಲಿ ರೆಡ್‌ಕಾರ್ಪೆಟ್‌ನಲ್ಲಿ ಓಡಾಡಿದ ಆಕೆ, ಜೊತೆಗೆ ಗಂಡನ ಕೈ ಹಿಡಿದುಕೊಂಡು ಉತ್ಸವದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡು ಛಾಯಾಗ್ರಾಹಕರಿಗೂ ಸಾಕಷ್ಟು 'ಪೋಸ್' ಕೊಟ್ಟಿದ್ದಾಳೆ. ಹಾಲಿವುಡ್‌ನಲ್ಲಿ ಆಕೆ ನಟಿಸುತ್ತಿರುವ 'ಇಸಿಂಟ್ ಇಟ್ ರೊಮ್ಯಾಂಟಿಕ್' ಸಿನಿಮಾದ ಪ್ರೊಮೋಷನ್ ನಡೆದಿದೆ. ಜೊತೆಗೆ ಮುಂಬೈಯಲ್ಲಿ ಆಕೆ ನಟಿಸುತ್ತಿರುವ ಸೋನಾಲಿ ಬೋಸ್ ನಿರ್ದೇಶನದ 'ದಿ ಸ್ಕೈ ಈಸ್ ಪಿಂಕ್' ಬಗ್ಗೆಯೂ ಭರವಸೆಯ ಮಾತುಗಳು ಕೇಳಿಬರುತ್ತಿವೆ. ಈ ಚಿತ್ರದಲ್ಲಿ ಫರ್ಹಾನ್ ಅಖ್ತರ್ ಮತ್ತು ಜೈರಾ ವಾಸಿಂ ಕೂಡಾ ನಟಿಸಿದ್ದಾರೆ. ಮದುವೆಯ ಬಳಿಕ ಪ್ರಿಯಾಂಕಾ ಅಮೆರಿಕ– ಭಾರತದ ಮಧ್ಯೆ ಸಮನಾಗಿ ಓಡಾಟ ನಡೆಸಿದ್ದಾಳೆ. ■

